**171** ಬಣ್ಣದ ಗುಬ್ಯಾರು ಎಣ್ಣಿ ಹೋಳಿಗಿಯಂಗ
ನುಣ್ಣಗಿರತಾರ ನೋಡುದಕ ಕೂಡಿದರ
ಸುಣ್ಣ ಸುಟ್ಟಂಗ ಸುಡತಾರ

**172** ಬದಕೀನ ಆಸೇಕ ಮುದಗ ಕೊಡೋದಕಿನ್ನ
ಚೆದಕನ ಗವಿಯಾಗ ಬಿಡಬೇಕ ಹಡದವ್ವ
ಮಿಡಕದ ಜೀವ ಕೊಡತೇನ

**173** ಬಬಲೇಶ್ವರದ ಸಂತಿ ಬ್ಯಾಡಪ್ಪ ನನ ಮಗನ
ಬಟ್ಟ ಕುಂಕುಮದ ಬಸವ್ಯಾರ ಕಂಡರ
ಹುಟ್ಟೀದ ಮನಿಯ ಮರಸ್ಯಾರ

**174** ಬಲ್ಲಿದ ಶ್ಯಾಣ್ಯಾನಂತ ಬೆಲ್ಲಾ ಮಾಡಲು ಬಂದ
ಇಲ್ಲದ ಹರಲಿ ಕಬ್ಬಿಗೆ ಕೊಟ್ಟರ
ಒಲ್ಲಿ ಕಳಿ ಕಳಿಸಿ ಒದಿತಾರೊ

**175** ಬಸವಣ್ಣ ನಿನಪಾದ ಹಸನಾಗಿ ತೊಳದೀನ
ಹೆಸರ ಗಲ್ಲೀಪ ಹೊಲಸೀನ ಹಾಡಾಕ
ಹಸನಾದ ದನಿಯ ಕೊಡ ನನಗ

**176** ಬಸವಣ್ಣನ ಹೆಂಡತಿ ಹಸೆಮಗಳು ನೀಲವ್ವ
ಬಸರಾದರ್ಹೆಂಗ ನಡದಾಳೊ ಆ ತಾಯಿ
ಸಸಿಯೊಳಗ ನವಲ ಕುಣದಂಗ

**177** ಬಸವನ ಪತ್ತೂರಿ ಬಿಸಿಲಿಗಿ ಬಾಡ್ಯಾವ
ದುಸಮಾನದಾಂವ ಮಳಿರಾಜ ತ-ಡದರ
ಬಸವಾ ನಿನ್ಹೆಂಗ ಸಲುವಲೇ

**178** ಬಾಗೋಡಿ ಬಸವಣ್ಣ ಭಾಳ ದೊಡ್ಡವನಂತ
ಮಾಡೀಸಿಟ್ಟೆನೋ ಮಗಡವ ಬಸವಣ್ಣಗ
ಪೋಣಿಸಿಟ್ಟೆನೊ ಸರಜಂಗ

**179** ಬಾಗೋಡಿ ಎಂಬೂದು ಬಾಲ್ಯಾರ ಪಟ್ಟಣ
ಮ್ಯಾಲ ಚೆನ್ನವ್ವನ ಅರಮನಿ ಬಾಗಲದಾಗ
ಬಾಗಿ ನಿಂತಾನ ಬಸವಣ್ಣ

**180** ಬಾದಾಮಿ ಬಣ್ಣದ ಕುಬಸ ಬಲುಚೆಂದ ತೋಲಿಗೆ
ಬಾಗಿದರ ಬೆನ್ನ ಬಿಗದಾವೊ ನಮ್ಮೂರ
ಶ್ಯಾಣ್ಯಾ ಸಿಂಪಿಗ ಹೊಲದಾನೊ

**181** ಬಾಳೀಪಟ್ಟಿ ಸೀರಿ ಬಾಯಾಗ ಬಿಳಿ ಎಲಿಯ
ಬಾಜಾರ ಹಿಡದ ಬರತಾಳೊ ಅವಳನ ಕಂಡ
ಬಾಯಾನ ಚುಟ್ಟ ಬಿಟ್ವಾರೊ

**182** ಬಿದ್ದ ಕಬ್ಬಿನ ಬೆಲ್ಲ ಬಿದ್ದೋಡಿ ಗೆಣಿತನ
ಗದ್ದ್ಯಾಗಿನ ರಾಡಿ ಗಟ್ಟೆಲ್ಲೊ ಹೆಣ್ಣನಗೂಡ
ನಿದ್ದಿಗಣ್ಣಾಗ ಇರಬ್ಯಾಡೊ

**183** ಬಿದ್ದಾನೊ ಕಾಮಣ್ಣ ಬಿಳಿ ಅಂಗ ಮೇಲಾಗಿ
ಒದ್ದ್ಯಾಡತಾನೊ ಶಿವನೆದರ ಕಾಮಣ್ಣ
ಬಿದ್ದಲ್ಲೇ ಬೂದಿಯಾದಾನೊ

**184** ಬಿದ್ದೋಡಿ ಅವರವ್ವ ಬುದ್ದೀಯ ಹೇಳ್ಯಾಳೊ
ಗುದ್ದಿ ಬ್ಯಾಡನ್ನ ಗುಳದಾಳಿ ಇಲ್ಲದೆ
ಕದ್ದ ಗಂಡಸರ ಕೂಡೂನ

**185** ಬೇಲಿ ಮ್ಯಾಲಿನ ಹೂವ ಬೆಳ್ಳಗಿದ್ದರ ಚಂದ
ಮಲ್ಲಿಗಿ ಹೂವಿನಂಥ ಮದಿವಿಂಡನ ಬಿಟಗೊಟ್ಟ
ಹುಲ್ಲಕೊಯ್ಯವನ ಹುಡಕ್ಯಾಳೊ

**186** ಬಿಳಿಯ ಗಲ್ಲದ ಮ್ಯಾಲ ಇಳದೆಳಿಕೂದಲ
ತೆರದ ದಾಳಿಂಬರ ತುಟಿಯವಳ ಕಂಡರ
ಹರದ್ಯಾಡು ಮನಾ ಹಾಂವಾತ

**187** ಬಳ್ಳಾನ ಹುಡಿಗ್ಯಾರು ಬಳ್ಳೊಳ್ಳಿ ತುಡಿಗ್ಯಾರು
ಬಳ್ಳೊಳ್ಳಿ ಗಂಟ ಬಗಲಾಗ ಹಿಡಕೊಂಡ
ಗುಳ್ಳವ್ವನಾಣಿ ಕೊಡತಾರೊ

**188** ಬೆಳ್ಳಾನ ಮಾರೆಕ್ಕಿ ನೀಯೇನ ಒಳ್ಳೆಕ್ಕಿ
ಕಳ್ಳಿ ಸಾಲಾಗ ಕರಿಯಕ್ಕಿ ಬಂದರ
ಮುಳ್ಳಾಗ ನುಗಿಸಿ ಬರುವಾಕಿ

**243** ಸೂಳೀಗಿ ಹೋಗವನ ಸುಲದ ಮಟ್ಟಿಯ ಕಟ್ಟಿ
ಸೂಲಕ ಹಾಕಿ ಎಳದರೂ ಆ ಮೂಳ
ಸೂಳೆಂಬು ಶಬುದ ಬಿಡಲಿಲ್ಲೊ

**244** ಸೂಳಿ ಬ್ಯಾಟಿನಾಯಿ ಗಂಡ ಜೂಗನಾಯಿ
ಸೂಳೀಯ ಅವ್ವ ಹಳಿನಾಯಿ ನಿಮ್ಮಪ್ಪ
ಬಾಳೇವಂತರ ಬಡನಾಯಿ

**245** ಸೂಳೀಗಿ ಹ್ವಾದಾವ ಏನಾದ ಎಂತಾದ
ಕಾಳ ನಾಯಾದ ಕಪಿಯಾದ ಆ ಮೂಳಾ
ಸೂಳೀ ಕಾಲೀಗಿ ಕೆರುವಾದೊ

**246** ಸೊಕ್ಕೀನ ಶ್ರೀಕೃಷ್ಣ ನಿನಗ್ಯಾಕಿಟ್ಟ ಹೆಂಡಿರೊ
ನನಗೊಂದ ಕೊಡು ಅಂದ ನಾರದ ಶ್ರೀ ಕೃಷ್ಣ
ನಾನಿಲ್ಲದಾಗ ಒಯ್ಯಂದ

**247** ಹಚ್ಚಾನ ಮೈಯವನ ಹವಳದ ತುಟಿಯನ
ಎಲ್ಲಿಗಿ ಹೋಗದ್ದೊಗಿಣಿರಾಮ ಮಲ್ಲಾಡದ
ಹಣ್ಣೀಗಿ ಹೋಗಿದ್ದ ಹಡದವ್ವ

**248** ಹಚ್ಚಿಬಟ್ಟಿನ ಕೈಯ್ಯ ಒತ್ತಿ ಹಿಡಿಯಲಿ ಬ್ಯಾಡೊ
ನೆತ್ತಳಿರಿಳದಾವೊ ಬೆರಳೀಗಿ ನನ ಗೆಣೆಯ
ಅತ್ತೆವ್ವ ನೋಡ್ಯಾಳೊ ಕೈಬಿಡೊ

**249** ಹಚ್ಚಿಬಟ್ಟಿನ ಮ್ಯಾಲ ಹರದಾಡು ಕುಂಕುಮ
ಇಚ್ಚುಳ್ಳ ಗೆಣಿಯ ಇದರೀಗಿ ಬಂದರ
ಮೆಚ್ಚಿದ್ದ ಗಂಡನ್ನ ಮರತಾಳೊ

**250** ಹಟಗಾರ ಹುಡಗೀ ಅವ್ವ ಕಟ-ಕಟದ ಹೇಳ್ಯಾಳ
ಚಟಗಾರನ ಬೆನ್ನ ಬಿಡಲಾಕ ಆ ಹುಡಗಿ
ಸೆಟ-ಸೆಟದ ಹಂಗ ತಿರಗ್ಯಾಳೊ

**251** ಹಟೇಲದಾಗಿನ ಹೆಣ್ಣ ಹಾದೀ ಗಿಡದಾನ ಹಣ್ಣ
ಹಾದ ಹ್ವಾದವರೆಲ್ಲ ಕಣ್ಣಿತ್ತಿ ಹಳಸ್ಯಾವೊ
ತಿಂದರ ತಿಂಗಳದ ಆರೈಕೊ

**279** ಹಾದರಗಿತ್ತಿ ಗುಣ ಹಾಲಿನಂಗನಬ್ಯಾಡೊ
ಹಂಬಲಿಬ್ಯಾಡೊ ಹಗಲಿರುಳ ಈ ಮಾತ
ತುಂಬಿದ ಹೊಳಿಯಾಗ ಹರಗೋಲೊ

**280** ಹಾದರಗಿತ್ತೀಗಿ ಹಾಂವ ಕಡದರೇನೊ
ಊರ ತುಂಬೆಲ್ಲ ಗೆಣಿಯಾರೊ ಅವಳೀಗಿ
ಕರಿಕೆ ಬೇರೆಲ್ಲ ಅಗಸುದ್ದಿ

**281** ಹಾದೀಯ ಹೊಲ ನೋಡ ಗೋದಿಯ ತೆನಿ ನೋಡ
ಹೋರೀ ಮೇಸೀನಿ ಇಣಿನೋಡ ಎಲೆ ಹುಡಗಿ
ಕ್ವಾರಿ ಮೀಸೀಯ ಹುರಿ ನೋಡ

**282** ಹಾರೂರ ಓಣ್ಯಾಗ ಮಾರುದ್ದ ಶ್ಯಾಂವಿಗಿ
ಡೊಣ್ಣಿ ಮ್ಯಾಲ ಡೊಣ್ಣಿ ತಿಳಿತುಪ್ಪ ಹೊಡದರ
ಹಾರೂನ ಜುಟ್ಲ ನಿಗರ್ಯಾವೊ

**283** ಹಾರೂರ ಓಣ್ಯಾಗ ಆರ್ಯಾರ ಹುಡಗನ್ನ
ಹಾರ್ಯಾರಿ ಒದ್ದರ ಖಬರಿಲ್ಲೊ ಆ ಹುಡಗ
ಹಾರೂರ ಹುಡಗಿನ್ನ ಬಿಡಲಿಲ್ಲೊ

**284** ಹಾಂವ ಹಗ್ಗವ ಮಾಡಿ ಚೇಳ ಸಿಂಪನು ಮಾಡಿ
ಊದೀನ ಕಡ್ಡಿ ನಗ ಮಾಡಿ ಹುಡಗೂರು
ಜಾಲಿ ಗಿಡಕೆಡಿಯ ಹೊಡದಾರೊ

**285** ಹಾಸಗಲ್ಲಿನ ಮ್ಯಾಲ ಹಾದ ಹ್ವಾದವರ್ಯಾರ
ಪಾದ ಮೂಡ್ಯಾವ ಪರಿಪರಿ ಗುರುಪಾದೇಶ
ಹಾದ ಹೋಗ್ಯಾನ ಜಳಕಕ್ಕ

**286** ಹಾಸಗಲ್ಲಿನ ಮ್ಯಾಲ ಹಾದ ಹ್ವಾದವನ್ಯಾರೊ
ಮಾಸ ಮರಿಗುದರಿ ರಾಯಣ್ಣ ನಿನ ಕುದರಿ
ಈಸ ಬಿದ್ದಾದೊ ರಣದಾಗ

**287** ಹುಚ್ಚುಡಗ ಕಾಮಣ್ಣ ಉಚ್ಚೀಯ ಹೊಯ್ದನ
ಬಚ್ಚಲ ತುಂಬಿ ಕುಣಿ ತುಂಬಿ ನೆರಮನಿಯ
ನಿಚ್ಚಣಿಕೆ ತಂದ ನೆಲಿನೋಡ

ನಾಲ್ಕಾರು ದಿನ ಅಲ್ಲಿ ಭಾವಣಿ ಮಾಡಿ
ಏಕಚಿಂತಾಮಣಿರಾಯನ ಕೂಡಿ
ಪಂಕ್ತಿಯ ಜೋಡಿ ಹೋಳಿಗಿ ತುಪ್ಪಾ ನೀಡಿ
ರೊಕ್ಕರೂಪಾಯಿ ವರ ಭಿಕ್ಷಾವ ಮಾಡಿ ||

ಅಪ್ಪ ದೇಸಾಯಿ ತಾ ಬಂದಾನು ಧೀರ
ತೋಪು ತಂದಾನು ನೋಡುತ ಹದಿನಾರ
ಅಪ್ಪ ನಿಪ್ಪಾಣಿಯ ಅವ ಶಮಶೇರ
ಒಪ್ಪಿತು ಫೌಜವು ಹತ್ತು ಸಾವಿರ ||

ನಣದಿಗೀ ಹಳ್ಳಕ ಇಳಿಸಿದ ತಂದು
ಋಣಋಣ ದ್ರವ್ಯ ನಿವಾಳಿಸಿ ನಿಂದು
ಹಣಗಳ ಸೂರಿಮಾಡಿದ ಬಾಳೊಂದು
ಜಾಣ ದೇಸಾಯಿ ಅಪ್ಪಾಸಾಹೇಬನಂದು ||

ಎಲ್ಲಾರು ಒಂದಾಗಿ ಮುಂದಕೆ ಸಾಗಿ
ನಿಲ್ಲದೆ ಗೋಡ್ಗೇರಿಗೆ ಇದಿರಾಗಿ
ಬಲ್ಲಿದ ಚಂದಿರ ಗುಣವತಿ ಸಾಗಿ
ಇಲ್ಲೆ ಬಂದಿಳದೀತು ಹೊಂಗಲಿಗೆ ||

ಹೊಂಗಲ ಪುರದೊಳು ಕಂಡಾನು ತೋಟ
ಮಂಗಲಕರವಾಗಿ ಕಂಡೀತು ನೋಟ
ಶೃಂಗಾರ ವನದೊಳು ಹಾಕಿದ ಊಟ
ಗಾಂಗೇಗ ಶ್ರೀಮಂತ ಆಡಿದ ಆಟ ||

ಒಂದು ದಿನ ಅಲ್ಲಿ ಭಾವಣಿ ಮಾಡಿ
ಮುಂದಕ್ಕೆ ಕೆರೀಪಾಳೆವ ನೋಡಿ
ಬಂದಿತು ಬಾಜೀರಾಯನ ದಳಗೂಡಿ
ಚೆಂದದಿ ಕುದುರೆಯ ರಥಗಳ ಹೂಡಿ ||

ಮರುದಿನ ಹೊತ್ತೇರಿ ಇಳಿವಿದ ದಂಡು
ಬೆರಗಾದ ಬಾಜೀರಾಯ ಪ್ಯಾಟಿಕಂಡು
ಹರದಾರಿ ಅಂಗಡಿ ಜವಳಿಯ ದಿಂಡು
ಕರೆದು ದೈವದವರ ಸೆಟ್ಟರ ಹಿಂಡು ||

ರುದ್ರವ್ವನ ಹೆಸರು ಅಡಗೀತು ಇಂದು
ಚಂದ್ರಕಾಂತಿವಳ ಪುತ್ರರು ಬಂದು
ಸುಂದ್ರ ಮಲ್ಲೇಂದ್ರಗ ಕಾಗದವೊಂದು
ಮಲ್ಲೇಂದ್ರನ ಕೈಯಾಗ ಕೊಟ್ಟರು ತಂದು ॥

ಬರೆದ ಕಾಗದ ಮಲ್ಲೇಂದ್ರನು ನೋಡಿ
ಧರಣಿ ಮೇಲೆ ಬಿದ್ದು ತಾ ಹೊರಳಾಡಿ
ಮೂರು ಮಕ್ಕಳ ಪರದೇಶಿ ಮಾಡಿ
ಹರನೊಳು ಅತ್ತೆವ್ವ ಹೋದಳೆ ಕೂಡಿ ॥

ಬಾದ್ದುರ ಸೆರೆಯನು ಐದಾಗ ಅತ್ತೆ
ಸಾಧಿಸಿ ಜಪತಪ ಮಾಡಿದಿ ನಿತ್ಯೆ
ಮಹದೇವನ ಪೂಜೆ ಮಾಡಿದಿ ಅತ್ತೆ
ಹೋದಂಥ ದೇಶಗತಿ ನಿಲ್ಲಿಸಿದಿ ಮತ್ತೆ ॥

ಅತ್ತತ್ತು ಮಲ್ಲೇಂದ್ರ ಬಿದ್ದನು ನೆಲಕೆ
ಮುತ್ತಿನ ಸರಗಳು ಹರದಾವು ಪದಕೆ
ಉತ್ತಮ ಶುಭಗಳು ಆಗಲಿಕ್ಕೆ
ಹತ್ತೀತು ಮಲ್ಲಸರ್ಜನ ಜೀವಕ್ಕೆ ॥

ಚಿಂತೀಲೆ ಸೊರಗಿದ ಮಲ್ಲೇಂದ್ರಭೂಪ
ನಿತ್ಯ ದಿನದಿನಕೊಂದಾದನು ರೂಪ
ಹತ್ತೀತು ಶರಿರಕ್ಕೆ ಹಿಮಜ್ವರ ತಾಪ
ಹಂತೇಲಿದ್ದವರಿಗೆ ಮಾಡಿದ ಕೋಪ ॥

ಮೂರು ವರುಷ ಕುಳಿತು ಮಲ್ಲೇಂದ್ರ ಪುಂಡ
ಮರಣ ಕಾಲಗತಿ ಬರುವದ ಕಂಡ
ದೊರೆ ಮಲ್ಲಸರ್ಜನು ಯೋಚನೆಗೊಂಡ
ಬರೆದು ಸಿಕ್ಕೇದ ಪತ್ರ ಕಳಿಸಿದ ಪುಂಡ ॥

ನೇಮದಿ ಪುಣ್ಯದ ಶಹರವ ಬಿಟ್ಟು
ರಾಮಲಿಂಗಪ್ಪನು ಅಲ್ಲಿಂದ ಹೊಂಟು
ತಮ್ಮಗಳಿಗೆ ತಿಗಡಿ ಹೊಂಗಲ ಕೊಟ್ಟು
ಬ್ರಹ್ಮ ಬರೆದ ಬಾವುಸಾಹೇಬನು ಶ್ರೇಷ್ಠ ॥

ಹರಹರ ಎನುತಲಿ ಒಳಿಯಾಕ ಬಂದು
ಹರ ದುರದುಂಡಿಗೆ ಕಾಣಿಕೆ ತಂದು
ವರಗಳ ಎಣಿಸಿ ತಂದಾರು ನೂರೊಂದು
ದುರದುಂಡಿ ಪಾದವ ಕಂಡೇವು ಎಂದು ||

ಕಷ್ಟಬಿಟ್ಟು ತಾನು ತಂದಂಥ ವಾರ್ತಿ
ಅಷ್ಟುರ ಮುಂದ ತಾ ಹೇಳಿದ ವಾರ್ತಿ
ಪಟ್ಟದ ಚನ್ನವ್ವ ತಂದಳು ಆರ್ತಿ
ಇಟ್ಟರು ಮುತ್ತುಮಾಣಿಕ ಮನಪೂರ್ತಿ ||

ಮಡದಿ ಮಕ್ಕಳು ಮಾತಾಡುತ ಕುಳಿತು
ಮಡದಿ ಚನ್ನವ್ವನು ಹೇಳ್ಯಾಳು ನಿಂತು
ಒಡೆಯ ಲಾಲಿಸು ಎನ್ನ ಕನಸಿನ ಹೊತ್ತು
ಒಡದೀತು ನತ್ತಿನ ಮೇಲಿನ ಮುತ್ತು ||

ಸತಿಯ ಚನ್ನವ್ವನ ಪ್ರೀತಿಯ ಅರಸ
ಮತಿವಂತಿ ಕೇಳು ನಾ ಹೋಗಿ ಮೂರು ವರ್ಷ
ಮುತ್ತು ಒಡದೀತಂದರ ಕನಸೀನ ಸರಸ
ಚಿತ್ತಕ್ಕ ತಾರದೆ ಮಾಡಿದ ಹರುಷ ||

ಹತ್ತು ಸಾವಿರ ನಿತ್ಯ ಜಂಗಮಕುಣಿಸಿ
ಬೆತ್ತಾಸ ಹಣ್ಣು ಸಕ್ಕರಿ ದಣಿದಣಿಸಿ
ಮತ್ತೊಂದು ರೂಪಾಯಿ ಎಣಿಯೆಣಿಸಿ
ಭಕ್ತಿ ಮಾಡಿದ ಜಂಗಮಜನಕೆ ಉಣಿಸಿ ||

ಬೇಡಿದ ಬಯಕೆಯು ಮನಸಿನ ಇಚ್ಛೆ
ಕೂಡಿಸಿಕೊಟ್ಟನು ಮಹದೇವನು ಮೆಚ್ಚಿ
ನೋಡಿ ಬಂದಾರೊ ಹೊಂಗಲವನು ನೆಚ್ಚಿ
ಓಡಿ ಹೋದಾವು ಇಲ್ಲಿಗಿದಿಗಾಳು ಬಿಚ್ಚಿ ||

ಹೊಂಗಲ ಹೊಕ್ಕಾನು ಮಲ್ಲೇಂದ್ರ ಪುಂಡ
ಜಂಗಮರೆಡಬಲ ಮಾರ್ಬಲ ದಂಡ
ಸಂಗನಬಸವನ ಶರಣರ ಹಿಂಡ
ಮಾಂಗಲ್ಯ ಆಶೀರ್ವಾದವನು ಕೈಕೊಂಡ ||

ತಕ್ಕಡಿ ದಂಡಿಗಿ ಮುರದೀತಲ್ಲ ಅವ
ಲಕ್ಕಿ ರೇವಡಿ ಬೆಂಡು ಬೆತ್ತಸ ಫುಟಾಣಿ
ಮಕ್ಕಳ ಕರಗೊಂಡು ಮುಕ್ಕಿತು ಮಂಗ ॥

ಪೆಟ್ಟಿಗಿಯೊಳಗಿನ ಪಟ್ಟೆದಂಚಿನ ಸೀರಿ
ಇಟ್ಟು ಬಚ್ಚಲದಾಗ ಕುಂತಿದ್ದೆನೆ ಎನ್ನ
ಕಟ್ಟಿದ ಕೂದಲ ಬಿಚ್ಚಿದ್ದೆನೆ ಮತ್ತೆ
ಬಟ್ಟಬತ್ತಲೆ ನಾನು ಕೂತಿದ್ದೆನೆ ಆಗ
ತಟ್ಟಿ ಮುರಿದು ಬಂದು ಇಟ್ಟ ಸೀರೆಯ ಕೊಂಡು
ಕಟ್ಟು ಕುಲಾಯವ ಕಸಗೊಂತು ಮಂಗ ॥

ದಿಗ್ಗನೆ ಹೊಕ್ಕಿತು ಮಗ್ಗದವರ ಮನಿ
ಹುಗ್ಗಿಯ ಗಡಿಗೆಗೆ ಹಾರಿತಲ್ಲ ಅದು
ಬಗ್ಗಿಸಿ ಬಾರಲ ಹಾಕಿತಲ್ಲ ಬಲು
ಸುಗ್ಗಿಯಾಯಿತೆಂದು ಹಿಗ್ಗಿತಲ್ಲ ಕುಂತು
ಬಗ್ಗಿದವರ ಮೇಲೆ ಹಗ್ಗ ಹರಿದಿಳಿದು
ನುಗ್ಗ ಮಾಡಿತವ್ವ ಅಗ್ಗದ ಮಂಗ ॥

ಹಾರಿತು ಜವಳಿಯ ಅಂಗಡಿ ಸಾಲಿಗೆ
ಬಾರಲ ಹಾಕಿತು ದೌತಿಯನು ಕಿತ್ತು
ಈಡಾಡಿತಲ್ಲ ಜವಳಿಯನು ಮಣಿ
ಗಾರಂಗಡಿಗಿಟ್ಟು ದಾಳಿಯನು ಪಟ್ಟೆ
ಮಾರು ನಾರೇರ ಮಾರಿಯ ಮೇಲ್ಹೊಡೆದು
ನೀರೆಯ ಕಳೆದಿತು ಸಿರಿಗೇಡಿ ಮಂಗ ॥

ಮತ್ತೆನ್ನ ಬಸುರೆಂದು ಬುಧ್ಧಿ ಬೋನವ ಮಾಡಿ
ಒತ್ತಿ ಬಳ್ಳೊಳ್ಳಿಯ ಬೆರೆಸಿದ್ದೆನೆ ಆಗ
ಚಿತ್ತೆಲ್ಲ ನಾನಲ್ಲಿ ಇರಿಸಿದ್ದೇನೆ ನನ್ನ
ಸುತ್ತಲೆ ಯಾರಿಲ್ಲ ಕುಳಿತಿದ್ದೆನೆ ಓಡಿ
ಹೊತ್ತು ನೋಡಿ ಬಂದು ಮುತ್ತಿಕೊಂಡಿತೊಂದು
ತುತ್ತಾರ ಬಿಡಲಿಲ್ಲ ತುಡಗಿನ ಮಂಗ ॥

ಹುಡಗೇರುಡಲೊಳು ಕಡಲಿ ಕೊಬ್ಬರಿ ಕಬ್ಬು
ಹಿಡಕೊಂಡು ಹೋಗಲು ತುಡಕಿತವ್ವ ಗಲ್ಲ
ಹಿಡದೆನ್ನ ಮಾರಿ ನೋಡುತವ್ವ ಉಟ್ರ

ಎಲ್ಲಾ ಇಷ್ಟೊಂದು ತೆಲಿತುಂಬ
ಬೆಳ್ಳಗ್ಯಾಕ ಆಗ್ಯಾದೊ ॥

ನೆತ್ತಿ ಬೆಳ್ಳಗಾದ ಸುದ್ದಿ
ಒತ್ತಿ ನಾನು ಹೇಳುವೇನು
ಚಿತ್ತ ವಿಟ್ಟು ಕೇಳೇ ಚದರಿ
ಮುತ್ತ್ಯಾಗ ನಾನು ಹೋತೇನು ॥

ಮುತ್ತ್ಯಾಗ ಹೋತರ ಒಳ್ಳೇದಾತು
ಸುತ್ತ ಚರ್ಮ ಜೋಲುತಾದ
ನೆತ್ತರಿಲ್ಲದ ದೇಹದೊಳಗ
ಸೋತಿಯಾಕೋ ಇಷ್ಟೊಂದು ॥

ಕಾಂತೆ ನಿನ್ನ ಚಿಂತಿ ಹತ್ತಿ
ಭ್ರಾಂತನಾಗಿ ಸೋತೆ ನಾನು
ಕಾಂತೆ ಶಿರೋಮಣಿ ಎನ್ನ
ಭ್ರಾಂತಿ ನೀನು ತೀರಿಸು ॥

ಮುಪ್ಪಿನ ಕಾಲಕ ಇಂಥ ಮಾತು
ಅಪ್ಪ ನಿನಗ ಸಲ್ಲುವದಲ್ಲ
ಸಪ್ಪಳಿಲ್ಲದೆ ನಿನ್ನ ಮನಿಗೆ
ಗಪ್ಪನಾಗಿ ಹೋಗಿನ್ನು ॥

ಗಪ್ಪನಾಗಿ ಹೋಗಲಿಕ್ಕೆ
ತಪ್ಪುಗಳೇನು ನಾ ಮಾಡಿದ್ದು
ಒಪ್ಪದಿಂದ ಕರಿಯಬ್ಯಾಡಾ
ನಿನ್ನಪ್ಪ ಗಳಿಯನಾಗುವೆ ॥

ಬಲ್ಲಾ ಬಟ್ಟೆ ಆಡುವದಲ್ಲ
ಗಲ್ಲ ಸೊಟ್ಟು ಬಿದ್ದಾವಲ್ಲ
ಜೊಲ್ಲ ಸೋರತದ ಕೋಲ ಊರಿ
ಮೆಲ್ಲಕ ಯಾಕ ನಡೀತೀ ॥

ಹೇಡಿ ಸರಕಾರ ಕಾಯದೆಕಾಗಿ
ಬಡಿಗಿ ಎನ್ನ ಕೈದಾಗೈತಿ

ದರಕಾರಿಲ್ಲದೆ ಕೇಳುತ್ತೀ
ಚರಕಿ ತೆಗೆಸಿ ಬಿಡುವೆನು ॥

ಮುರ್ಖದ ಮಾತ ಆಡಬ್ಯಾಡ
ಮುಖಾ ಇಷ್ಟೊಂದ ಒಳ್ಳೇದಲ್ಲ
ಸರಕ್ಕನೆದ್ದು ಬಾರೆ ಪೋರಿ
ಹರಕ್ಕೊತ್ಯಾಕ ಇಷ್ಟೊಂದು ॥

ಮರ್ಕಟನಂತಾ ಮಾರೀ ಮುದಕ
ನರಕ್ಯಾನಂಗ ಇದ್ದೀ ನೀನು
ಹೊರಕಡಿಗಿ ಕುಂತ ಎದ್ದೆನೆಂದರೆ
ಬರ್ಕತ ಇಲ್ಲ ಮೈಮ್ಯಾಗೆ ॥

ಕ್ವಾಡಗನಂಗ ಆಡಬ್ಯಾಡ
ಖೋಡಿ ಖುಲ್ಲಾ ಗುಣದವಳೆ
ಗಾಡಿನತ್ತಾ ಮಾಡಿಸಿ ಇಡುವೆ
ನಡಿಯ ರಂಗ ಮಾಲೀಗಿ ॥

ಅತ್ತ ಇತ್ತ ಬರುವದಕ್ಕ
ಪಾತರದವರ ಪೋರಿಯಲ್ಲ
ರೀತಿ ತಪ್ಪಿ ಆಡದಿರೋ
ಪ್ರೀತಿ ಯಾಕೊ ಇಷ್ಟೊಂದು ॥

ಪ್ರೀತಿಯಿಂದ ನಿನ್ನಗೂಡ
ನೀತಿಯಿಂದ ಆಡುವೇನು
ಸೋತು ಬಾರೆ ಸದನದೊಳು
ಪ್ರೀತಿ ಕಾಂತೆ ಕಾಮನಾಟಕೆ ॥

ಕಂಗಾಲಿಷ್ಟೊಂದು ಯಾಕೊ ನೀನು
ಹಂಗು ಹರಿದು ಕೇಳುತಿದ್ದೀ
ಹಿಂಗಿ ಹೋಗೇದ ನಿನ್ನ ಪ್ರಾಯ
ಸೋಂಗು ಯಾಕೋ ಇಷ್ಟೊಂದು ॥

ಕಂಗಾಲಿಲ್ಲ ಮನಿಯಾಗ
ಮಸ್ತ ಬೆಳ್ಳಿ ಬಂಗಾರ ತುಂಬ ವಸ್ತು

ಬೈಲಿಗಿಳಿಸುವಂಥ ಜೋರು ಅಂವಗಿಲ್ಲ
ಕೊಲ್ಲಲು ಮನುಜಾಗ ಧೈರ್ಯವು ಇಲ್ಲ
ಗಂಡ ನನ ಮದನೋಡಿ ಎದೆ ಒಡೆದನಲ್ಲ
ಇಲ್ಲಿ ತನ ಬಂದರೆ ಮುರಸೂವೆ ಹಲ್ಲ ॥

ಹಲ್ಲ ಮುರಿಸಲಿಕ್ಕೆ ದೊರಿಯೇನೋ ನೀನು
ಕಲ್ಲಗಾಣಕ್ಕೆ ಹಾಕಿ ಎಳಸುವೆ ನಾನು
ಗಲ್ಲಿಗೇ ಹಾಕಿ ನಿನ್ನ ಇಲ್ಲ ಅನಿಸುವೆನು
ಬಲವಿದ್ದ ಭಾವಗ ಹೇಳಿ ವದಿಸುವೆನು ॥

ಎಲ್ಲಿ ಕಡದ ಹೆಸರ ಆಗ್ಯಾನ ಅವನು
ಚಿಕ್ಕಂದಹಿಡಿದ ಗುಣ ನೋಡಿನೋ ನಾನು
ಯಾತಕ್ಕ ಹೇಳುತ್ತಿ ಬಡಿವಾರ ನೀನು
ಇಲ್ಲಿ ತನ ಬಂದರೆ ಹಿಚುಕಿಸುವೆ ಗೋಣು ॥

ಗೋಣ ಹಿಚಕಲಿಕ್ಕೆ ಅರಸೇನು ನೀನು
ದೂರ ನಿಲ್ಲು ಎನ್ನ ಪುರುಷ ಬರುವನು
ನಿನ್ನನ್ನು ಕಂಡರೆ ಸೀಳಿಹಾಕುವನು
ವಾರಿ ಬಿದ್ದು ಓಡಿ ಹೋಗುವೇ ನೀನು ॥

ವಾರಿ ಬಿದ್ದು ಓಡಲಿಕ್ಕೆ ಹೆಂಗಸಲ್ಲೇ ನಾನು
ನಿಲ್ಲಲಾರ ಎನ್ನ ಧೈರ್ಯಕ್ಕೆ ಅವನು
ಬಿಲ್ಲು ಬಾಣ ಹಿಡದ ನಿಂತೇನು
ಕಡದ ಹಾಕಿ ಅವನ ವಂಶ ಕಳದೇನು ॥

ಹಮ್ಮು ಮಾಡಿ ಹರಿ ಬ್ರಹ್ಮನು ಕೆಟ್ಟ
ಹೆಂಗಸಿನ ಕಾಲಾಗ ಮನಿಮಾರು ಬಿಟ್ಟ
ಅಡಿ ಅಡಿ ತಿರುಗಿ ಆಗಿದ್ಯೋ ಬಟ್ಟಾ
ಸುಳ್ಳಲ್ಲ ಶಾಶ್ವತ ಹಾಕೋ ನೀ ಗಂಟಾ ॥

ಹೌದೆ ಬಾಲೀ ಶಾಸ್ತ್ರ ಹೇಳೀದಿ ಎಷ್ಟ
ಹೊಟ್ಟಿ ಮಗಳೀಗೆ ಸ್ವಯಂ ಬ್ರಹ್ಮ ಕೆಡಿಸಿಟ್ಟ
ಧ್ರುವರಾಜ ಗೆದ್ದಾನ ಹೆಣ್ಣಾದ ಸಿಟ್ಟ
ನಿನಗ ನನಗ ಕೂಡಿ ಬಂದಾವ ಕೂಟ ॥

ಕಂಸನ ಅಂಜಿಕಿ ಯಾತರದೋ ಏನೋ
ಕಾಲೀಯ ಮರ್ಧನ ಮಾಡೀದನವನು
ಸೊಕ್ಕ ಇದ್ದವನಿಗೆ ಸೀಳಿ ಒಗದಾನೋ
ಗೋವರ್ಧನ ಗುಡ್ಡ ಎತ್ತಿ ಒಗದಾನೋ ॥

ಗುಡ್ಡವ ಹಿಡಿದದ್ದು ಗೊತ್ತಾದ ಅನ್ನು
ಕಾಲಿಯವನಿಗೆ ನೋಡಿ ಅಂಜಿ ಹೇತಾನು
ಮರಣವು ಬಂದಿತು ಓಡಿ ಹೋಗ್ಯಾನು
ಮುಚಕುಂದ ಬೆನ್ನಿಗಿ ಹೋಗಿ ನಿಂತಾನೋ ॥

ಓಡಿ ಹೋಗದ ಸುದ್ದಿ ನಿನಗ ಗೊತ್ತೇನು
ಹಿಂದಕ್ಕೆ ವಚನವ ಕೊಟ್ಟು ಬಂದಾನೋ
ಅದಕಾಗಿ ಅವನಿಗೀ ಕೊಟ್ಟ ದರುಶನೋ
ಮುಚಕುಂದ ಜನ್ಮವು ಆಯಿತು ಪಾವನವು ॥

ಧುಮ್ಮ ಧುಮ್ಮಣ್ಣ ಧುಮ್ಮ ಸಾಲಿಗಣ್ಣ
ಧುಮ್ಮ ಧುಮ್ಮ ಧುಮ್ಮಾ ಸಾಲಿಗೆ

* * *

## ಮುಚಖಂಡಿಯ ದುಂದುಮೆಯ ಪದಗಳು

ಶ್ರೀಶ ಮೈದುನನಿಗೆ ಪಾಶುಪತವನಿತ್ತ
ಸರ್ವನಮಿತ ಮಹೇಶನೇ
ಗಿರಿಜೇಶನೇ ಮೂರ್ಜಗದೀಶನೇ
ಪರಮೇಶನೇ ಕೈಲಾಸವಾಸನೇ ಸುಪ್ರ
ವೇಶನೇ ಅಂಬರಕೇಶನೇ ಮದನ ವಿನಾಶನೇ ಬೇಗನೇ
ಪಾಲಿಸೆನ್ನ ದಯದಿ ॥

ಧಾತ್ರಿಯೊಳು ಮುಚಖಂಡಿ ಕ್ಷೇತ್ರದಿ ನೋಡಿದೆ
ಪಾತ್ರದವರನು ಆ ಜಾತಿಯೊಳು ಕಂಡು
ರಾತ್ರಿಯೊಳ್ಕುಳಿತು ಚರಿತ್ರೆ ಮಾಡಿದೆನಿಟ್ಟು
ಮಾತ್ರ ಮಾಡದೆ ವಿಚಿತ್ರ ಕೇಳುವದು ॥

ಪ್ಯಾಟಿಗಳೊಳಗೆಲ್ಲಾ ನೀಟಾದ ಬಾಗಲಕೋಟೆಯ ಸಖಿಯರ
ಧಾಟ ಬೇರೆ ದೇಹದಾಟವು ಎದಿ ಮೇಲೆ ಮಾಟ ಬೇರೆ ರತಿ

ಪುರತರ್ಬಿಯತ ಸಾಲಿಮಠವಂತನು ಮದ
ನಾರಿವಾಹನನಾಲಿಂಗಾಭ್ಯವನು ಇವ
ರ್ಚಾರು ಪುತ್ರ ಚನ್ನಬಸವಯ್ಯ ಸಾರಿದ
ನೀರಜಾಕ್ಷಿಯರ ವೈಯ್ಯರವ ಕಂಡು ॥

* * *

## ಸಾಮಾಜಿಕ ಹಾಡುಗಳು

### 8. ಹೆಂಗ ಮಾಡಲೆವ್ವ ತಂಗಿ

ಹೆಂಗ ಮಾಡಲೆವ್ವ ತಂಗಿ
ಗಂಡ ಗಂಟ ಬಿದ್ದ ಕೊಂಗಿ ॥

ಕೊಂಡ ತಂದಾ ಹೆಂಡಾ ಭಂಗಿ
ಪುಂಡ ಹೋಲಾ ಕಳದ ಝುಂಗಿ
ಉಂಡಕೂತ ಹೊಗಿಯ ನುಂಗಿ
ತೊಡಲಾಕಿಲ್ಲ ಅಂವಗಂಗಿ ॥

ಬಂಗಾರಬಳಿ ಸಿಂಗಾರ ಸರಗಿ
ಮಾರಿದವ್ವ ಗಂಗಾಳ ಚರಗಿ
ಕೊಡ್ಲಿ ಕುರಪಿ ಕೊಮ್ಮಣಗಿ
ಉಳಿಯಲಿಲ್ಲ ಊದಗೊಳಗಿ ॥

ಮನಿಯಾಗ ಉಳದು ಒಡಕ ಗಡಗಿ
ಮಾಡಲಿಲ್ಲ ನಾನು ಅಡಗಿ
ತಿರಿಗಿ ಬಂದ ತಗೊಂಡ ಬಡಗಿ
ಕುತ್ತೀನವ್ವಾ ಗದ್ಗದ್ನಡಗಿ ॥

ಹೇಳಲಾರೆ ನಾ ಯಾರೀಗಿ
ಮನ್ಯಾಗಿಲ್ಲ ಕಸಬರಗಿ
ಬೀಳತೀನ ಭಾವಿ ಕೆರಿಗಿ
ಕೂತೀನವ್ವ ಮನದಾಗ ಮರಗಿ ॥

ಮನಸ್ಯಾನ ಮೃತ್ಯು ಭಂಗಿ
ಸಿದ್ಧನ ಪ್ರಸಾದ ಅಂತಾರ ತಂಗಿ

ಹಗ್ಗಾ ಹಚ್ಚಿ ಹರಕ ಚಪ್ಲಿಗಿ
ಜಗ್ಗಿ ಒಗಿರೆವ್ವಾ ಅವನ ಮಾರೀಗಿ ||

ಗುಣದಾಳ ಈಶಾ ಯೋಗಿ
ಗಂಡನ ಹಚ್ಚ ಹಾದೀಗಿ
ಬಾನಾ ಕೊಡತೀನ ಬಿಳಿಗೋದಿ ಹುಗ್ಗಿ
ಹೊಡಿಲಿ ರಾಮಾಪೂಜಾರಿ ಜಗ್ಗಿ ||

* * *

**9. ಹಸಗೇಡಿ ಹೆಣ್ಣು**

ಹೆಚ್ಚಿನ ಹೇಣ್ತಿ ಗಂಟ ಬಿತ್ತೊ ಪಡಶೆಂಟಾ ||

ತಿರಗೂಳ ಪತ್ತಲ ಉಟ್ಟ
ತಿಳೂವಾದ ಜಂಪರ ತೊಟ್ಟ
ಬೈತಾಲಿ ಭಾಳ ನೇಟ
ಬಳಿ ಕೈಯಾಗಿಲ್ಲ ಒಟ್ಟ ||

ಬಡತನಾ ಭಾಳ ಕೆಟ್ಟ
ದುಡಿಲಾರ್ದ ಕೈ ಕಟ್ಟ
ಮನಿಯಾಗ ಮಕ್ಕಳೆಂಟಾ
ಹಿರ್ಯಾರದಿಲ್ಲೊ ಗಂಟಾ ||

ಚಟಾಕೇಳ ಹದಿನೆಂಟಾ
ಚಹಾ ಬೇಕ ನೇಮಾ ನಿಟ್ಟಾ
ಹೇಸಿ ಎಲಿ ಅಡಕಿ ಚುಟ್ಟಾ
ನಾಸೀ ಸೇದೂಳ ನಾಚ್ಕಿ ಬಿಟ್ಟಾ ||

ಗಾಣದ ಎಣ್ಣಿ ತಂದಿಟ್ಟ
ತಾ ಮುಟಗಿ ಮಾಡಿ ಹೊಡದಾಳ ಗೋಟಾ
ಹಾಕಿತಿರುವಿ ಇಟ್ಟಾಳ ಹಿಟ್ಟ
ತಿನವಲ್ಲಂದ ನನ್ನ ಹಾಟಾ ||

ನಾರಿಕೈಮಾಗ ಇಲ್ಲ ಗಂಟ
ತೀರಬೇಕಲ್ಲಾ ಚ ಟಾ

ಕೆಡಸಲಾಕಂವ ಕಳದ ಕಚ್ಚಿ
ಹೊಡದನೆವ್ವಾ ಚಪ್ಲಿ ಉಚ್ಚಿ ॥

ಮುಕ್ತಿ ಹುಡುಗನ ರೂಪ ನೋಡಿ
ಕರದನೆವ್ವಾ ನಾ ಕೈ ಮಾಡಿ
ನೋಡ್ದ ಹೋದನವ್ವಾ ಅಲ್ಲಿಂದೋಡಿ
ಆದನೆವ್ವಾ ಅತ್ತ ಮಾನಗೇಡಿ ॥

ಎಂಟು ಮಂದೀನ ಇಟ್ಟೇನವ್ವ
ಆರಮಂದೀನ ಬಿಟ್ಟೇ ನವ್ವ
ಇಬ್ಬರಿಗಿನಾ ಕೆಟ್ಟೇನವ್ವಾ
ಎಲ್ಲಾರೊಳು ನಾ ನಟ್ಟೇನವ್ವಾ ॥

ಖಾಸಗುಣದಾಳಧೀಶ ಗೆಣಿಯ
ಸ್ವರ್ಗ ಲೋಕ ಅವನ ಮನಿಯ
ಮಾಡಲೆಳಸುವೆ ನಾನು ಸನಿಯ
ಒಳಗ ಬಿಡಲು ರಾಮ ಹೊಣಿಯ ॥

* * *

## 12. ಬೆಕ್ಕಿನ ಬೈಬ್ಯಾಡ

ಬೆಕ್ಕಿನ ಬೈಬ್ಯಾಡ
ಬಾಲಿ ನಿನಗದಲ್ಲ ಜೋಡ ॥

ಬ್ಯಾಳಿ ತಿಂದದ ಬೆಕ್ಕ ಒಳ್ಳೆ ಹರ್ಷ ನಿನಗನಸ
ಅದರ ಮ್ಯಾಲ ನೀ ಮಾಡೀದಿ ಮನಸ
ಬೆಕ್ಕ ಬರಲಿಕದರ ಬಿದ್ದೀತ ಕನಸ
ಬಿದ್ದೋಡಿ ತಗಿ ಅದರ ಮ್ಯಾಲಿನ ಮನಸ ॥

ಉಂಡ ಹಾಸಿದಾಳವ್ವ ಹೊಸದೊಂದ ಕೌದಿ
ಬೆಕ್ಕ ಬರಲಿಲ್ಲಂತ ನೋಡತಾಳ ಹಾದಿ
ಬಾಲಿಗಿ ಬರಲಿಲ್ಲ ಬೆಳಗಾನಾ ನಿದ್ದಿ
ಅಕ್ಕನ ಕೇಳತಾಳ ಬೆಕ್ಕಿನ ಸುದ್ದಿ ॥

ಕುತನಿ ಕುಬಸಮ್ಯಾಲ ಹೊಳೆವ
ರತನಹಾರ ಏಕಾಽವಳಿ
ಒತನದಾರಗ ಕೊಟ್ಟಾರ ಒಯ್ಯರಿ ॥

ನಾನು ಬಡವಂತ
ತೆಗಿಯಬ್ಯಾಡ ಜಗಳ
ನೋಡ ನನ್ನ ಮಾರಿ ॥

ಎಂದ ಮೈನೆರದೆ ಬಲುಜಾಣಿ
ನಿನ ಕಂಡಽ
ಹೊಂದಬೇಕಂತ ಕೆಣಕಿದೇನ ॥

ಎಂದ ಮೈನೆರದೆಽ ಎಲೆ ಬಾಲಿ
ಮಾರ್ಯಾಳ ಬಸವಣ್ಣಗ
ಒಮ್ಮೆ ಬಂದ್ಹೋಗ ॥

*** * ***

**10. ಬೇಕಾದ್ದಾದರ ಬಿಡಾಂವಲ್ಲ**

ಚೆಕ್ಕಿ ಆದೇನ ಒಣಗಿ
ತೆಕ್ಕಿ ಹಾಯುವೆ ನಾನು
ದಕ್ಕಿ ತಿಂದಽರ ಚಿಂತಿಲ್ಲ ॥

ಕನಸಿನೊಳಗ ಬಂದ ನೀನು
ಮನಸಿನೊಳಗ ಕರದಂಗಾತು
ಕೈ ಹಿಡಿದು ಜಗ್ಗಿ ಹೊಡೆದಂಗ ಜೋಲಿ
ಅಡರಾಸಿ ನೋಡುವದರೊಳಗ ಇದ್ದಿಲ್ಲ ಬದಿಯಲಿ ॥

ತಾಳಲಾರದ ಜೀಂವ ನಂದು
ತೋಳ ತೊಡಿಯಾಗ ಇಟಗೊಂಡು
ಹೋಳ ಮೈಯಿಲೆ ಬೀಳತೇನಽ ಹೊರಳಿ
ಸುಳ್ಳಲ್ಲ ಜಾಣಿ ನಿನ್ನಾಣೆ ಹೇಳಾವಲ್ಲ ಕಾಲಿ ॥

ಚೊಕ್ಕ ಬಂಗಾರದ ಖಡೆನಿಟ್ಟೆ ಸೂಳಿಭಾಂವಿತಕ್ಕ
ಪುರುಷಗ ಬರಹೇಳ ॥

* * *

# ಗೌರಿ ಹಬ್ಬದ ಹಾಡುಗಳು

## ಗಂಗಿ ಗೌರೀ ಹಾಡು

ಗಂಗಿನ ತರಬೇಕಂತ ನಂದಿನ ಸೃಂಗಾರ ಮಾಡಿ॥
ಕೊಂಬಣಸ ಕೊರಳsಹುಲಗೆಜ್ಜೆ ಕೋಲ ॥

ಕೊಂಬುs ಅಣಸ ಕೊರಳ ಹುಲಗೆಜ್ಜಿ ಶಿವರಾಯಾ॥
ಗಂಗಿsನ ತರವೋs ನಡದಾರ ಕೋ ॥

ಹಳ್ಳsದ ದಂಡಿsಗಿ ಹೂವ ಕೋವೂ ಜಾಣಿ
ಲಿಂಗಕೊಂದ್ಹೊವs ದಯಮಾಡ ಕೋ ॥

ಲಿಂಗಕೊಂದ್ಹೊವs ದಯಮಾಡಿದ್ರ ಮಾಡೇನ॥
ನಮ್ಮವ್ವ ನಮಗs ಬೈದಾಳ ಕೋ ॥

ಹಳ್ಳsದ ದಂಡಿsಗಿ ಹೂವ ಕೋವೂ ಜಾಣಿ॥
ಲಿಂಗಕ್ಕೆರಡ್ಹೊವs ದಯಮಾಡ ಕೋ ॥

ಲಿಂಗಕ್ಕೆರಡ್ಹೊವ ದಯಮಾಡಿದ್ರ ಮಾಡೇನ॥
ನಮ್ಮಪ್ಪ ನಮಗs ಬಡಿದಾನ ಕೋ ॥

ನಿಮ್ಮವ್ವ ಬೈದsರ ನಿಮ್ಮಪ್ಪ ಬಡಿದsರ॥
ಬೇಗ ಬಾ ಗಂಗಾ ಜಡಿಯಾಗಕೋ ॥

ಬಂದsರ ಬಂದೇನ ನೆಂಬಿಗಿಲ್ಲೋ ಶಿವನೆ॥
ರಂಭಾsಳೊ ನಿನ್ನ ಮನಿಯಾಗ ಕೋ ॥

ನನ್ನಾಣಿ ನಿನ್ನಾಣಿ ಮತ್ತ ನಿಂಗದಾಣಿ॥
ರಂಬಿಲ್ಲ ನನ್ನ ಮನಿಯಾಗ ಕೋ ॥

ಮತ್ಸ್ಯಾವತಾರ ಕೂರ್ಮಗಳಾಗಿ ಜನಿಸುತ
ಕೆಚ್ಚುದಾನವರ ಸೀಳಿದನು ||

ಬಾಯಬಡಿಕರೇನ ಬಲ್ಲರೊ ಮುನಿರಾಯಾ
ಗೋವಿಂದ ಅಜಹರಿ ಬಲ್ಲ
ಆವೆ ರೂಪುಗಳಿಂದ ಜನಿಸಿದ ಕಾರಣ
ತಾಯಿಗಳೆಂದು ಭಾವಿಸುತ ||

ಮೂಲ ಪ್ರಳಯಗಳಿಂದ ಶ್ರೀಹರಿ ತನ್ನ
ಆಲದೆಲೆಯ ಮೇಲೆ ಶಯನ
ಕಾಲೂರಿನಿಂದೇ ನಿನ್ನ ಗರ್ಭದೊಳೆಂದು
ನೀಲಲೋಹಿತ ನುತಿಸಿದನು ||

ಸೃಷ್ಟಿ ಈರೇಳು ಲೋಕಾದಿ ಲೋಕವು ನಿನ್ನ
ಹೊಟ್ಟೆಯೊಳಡಗಿದವೆನುತ
ಮುಟ್ಟಿ ಭಜಹಿಸಿ ಎನ್ನ ಹೆಸರಿಟ್ಟು ಕರೆದರೆ
ಕೃಷ್ಣವೇಣಿಯ ಪೆಸರೆನಗೆ ||

ಆರು ಬಲ್ಲರೊ ನಮ್ಮ ಆದಿ ಅನಾದಿಯ
ನೀರು ಭೂಪ್ರಳಯದ ರಹಿತ
ಈರೇಳು ಲೋಕದ ಪಿತಮಹ ಬಸವನ
ನಾರಾಯಣನು ತಾನೆ ಬಲ್ಲ ||

ತಂಗಿಯಾದಳು ತನ್ನ ಅಂಗದ ಜನನಿಯು
ಲಿಂಗಬಸವ ನಿರ್ಮಿಸಿದ
ಶೃಂಗವೆರಡನು ತನ್ನಂಗದ ಫಣೆಗಿಟ್ಟು
ಗಂಗೆ ತಾ ಮಾಡಿ ಪೂಜಿಸಿದ ||

ಹರನವತಾರನೆ ವರಮುನಿ ಕೇಳಿನ್ನ
ಗುರುಪರಂಜ್ಯೋತಿ ಬಸವನ
ಹರಿಯಜ ಸುರರಗಣಿತ ದೇವ ಋಷಿಗಳು
ಚರಣದಿ ಜನಿಸಿದರಖಿಳಾ ||

ಕಡುಚಲ್ವ ಗಂಗೆಯ ನುಡಿಯನಾಲಿಸಿ ಕೇಳಿ
ಮೃಡನವತಾರನಿಂತೆಂದ

ಜಡೆದಲೆಯ ಜೋಗಿ ಕೇಳು ಬಸವಣ್ಣ ಪಡೆದ ನಾನಾ ದೈವವ
ಮೃಡಬ್ರಹ್ಮ ಹರಿಯಾದಿ ದೇವದೇವೇಂದ್ರರು ಎಡದ ಪಾದದೊಳಡಗಲು ||

ಹುಲಿಯ ಚರ್ಮದ ಜೋಗಿಯೆ ಕೇಳಿನ್ನು ಬೆಲೆಯುಂಟೆ ಬಸವಣ್ಣಗೆ
ಹಲವು ದೈವಂಗಳಿಗೆ ಪಿತನು ತಾನೆನಿಸಿದನು ಲಲಿತಾಂಗ ಜೋಗಿ ಕೇಳು
ಜನಪ್ರಳಯ ಮಹಪ್ರಳಯವ ಬಸವಣ್ಣನ ಸ್ಥಲಸ್ಥಲದೊಳಿಟ್ಟು ಮೆರೆದ
ಸಲೆ ಗುರಬಸವಣ್ಣ ಸಂಗಮೇಶ್ವರನೆಂದು ಉಲಿದವು ವೇದ ಶ್ರುತಿಯು ||

**ಶ್ರುತಿ:**

ಶೃಂಗಮಧ್ಯಂ ಹರಿಶ್ಚೈವ ಯೋಗೋರಮ್ಯ ಉರಸ್ತಥಾ
ದೇವ ನಾಸಾಪುಟಃ ವಾಯುಃ ಚಕ್ಷುರ್ಭಾನು ನಿಶಾಕರೌ॥ ||

ಗಾತ್ರಂ ವೈ ವಿಶ್ವರೂಪಶ್ಯ ಪದಮೇವ ಚತುರ್ಯುಗಮ್
ಅಂಡಜಂ ಸರ್ವತೀರ್ಥಾಣಿ ವಾಮಃ ಸರ್ವಾಶ್ಯ ದೇವತಾ॥ ||

ಲಿಂಗಾನಿ ರೋಮರೋಮಾಣಿ ರಂಗಮಧ್ಯಂತು ಪೀಠಕಂ
ಶೃಂಗಮಧ್ಯೇ ಶಿವೋ ದೃಷ್ಟಃ ಕಂಠಸ್ಥಾನೇ ತು ಜಾನ್ಹವೀ
ವೃಷಭಾದನ್ಯಃ ಕಃ ಯೋಗೀ ಜಗದಾನಂದಕಾರಣಂ॥ ||

**ವಚನ:**

ಇಂತು ಸಕಲ ದೇವತೆಗಳ ಎಲೆ ಜೋಗಿ ಆಽ
ನಂತ ಕಾಲ ಅಡಗಿಸಿದ್ದರೆಲೆ ಜೋಗಿ
ಮುಂತೆ ಧರೆಯಕಾಶಗಳಿಗೆಲೆ ಜೋಗಿ ಪ್ರಳಯ
ವಾಂತು ಜಗವ ಸೃಷ್ಟಿಸಿದನು ಎಲೆ ಜೋಗಿ ||

ಸನ್ಯಾಸಿಗಳು ನೀವು ಕೇಳಿ ಎಲೆ ಜೋಗಿ ಪ್ರಳಯ
ವನ್ನು ಮುನ್ನ ಹೆಪ್ಪಗೊಟ್ಟರೆಲೆ ಜೋಗಿ
ತನ್ನ ಸೃಷ್ಟಿ ಜಗದ ಜೀವಿಗೆಲೆ ಜೋಗಿ ಅವರಿ
ಗನ್ನ ಉದಕ ಕಲ್ಪಿಸಿದನು ಎಲೆ ಜೋಗಿ ||

ಸತ್ಯಭಾವ ಖುಷಿಯೆ ಕೇಳು ಎಲೆ ಜೋಗಿ ಜಗಕೆ
ಬಿತ್ತು ಬೆಳಸು ನಿರ್ಮಿಸಿದನು ಎಲೆ ಜೋಗಿ

ಪಟ್ಟಪಟ್ಟಾವಳಿ ಜಿಬಿ ನಾಣ್ಯದ ಕಂಥೆ
ತೊಟ್ಟಾನು ಮಲೆಯಾಳ ಜೋಗಿ ||

ಆರಾರಿಗಳವಲ್ಲ ಅಪರಂಜಿ ಮುನಿರಾಯ
ಭಾರಿ ಕಿನ್ನರಿಗಳ ಪಿಡಿದು
ಮೂರುಲೋಕದ ಮುನಿಗಳ ಗುರುನಾಥನು
ಆರು ಶಾಸ್ತ್ರಗಳಳವಡಿಸಿ ||

ಚಿಟ್ಟಿಗ ನಾರಂದ ಮುನಿಗೊಂದು ವೇಷವ
ಮುಟ್ಟಿ ತಾ ಧರಿಸಿದ ಶಿವನ
ತೊಟ್ಟ ಎರಳೆಚರ್ಮ ಸುಟ್ಟ ಬೂದಿಯ ಲೇಪ
ಬಿಟ್ಟಾನವನ ಕಿರುಜಡೆಯ ||

ಬಗೆಬಗೆ ರೂಪನು ನಗೆಯಿಂದ ಧರಿಸಿದ
ಹಗಲುಗತ್ತಲೆ ಅದೃಶ್ಯಗಳ
ಉಗುರೊಳಗಡಗಿಸಿ ನಿಗಮಕಗೋಚರ
ನಗೆ ಮುಖದಲಿ ತೆರಳಿದನು ||

ಮಾರಹರನು ಚಿಕ್ಕನಾರಂದ ಮುನಿಗೂಡಿ
ಮೇರು ಮಂದರಗಳನಿಳಿದು
ಈರೇಳು ಲೋಕದ ನವಭಾಂಡಪೃಥ್ವಿಯಾ
ಘೋರಾರಣ್ಯಗಳ ನೋಡುತಲಿ ||

ನಡದಾನು ರಾಜ್ಯದ ಗಡಿಸೀಮೆಯ ದಾಟಿ
ಬೆಡಗು ತಾಣಗಳ ನೋಡುತಲಿ
ನಡುರಾಜ್ಯ ಗಿಡುರಾಜ್ಯ ಪಡೆರಾಜ್ಯ ಪರರಾಜ್ಯ
ಬಡಗು ರಾಜ್ಯಗಳ ನೋಡುತಲಿ ||

ಉರಲೋಕ ನರಲೋಕ ಸುರಲೋಕ ಹರಲೋಕ
ಪರಲೋಕ ಪರಬ್ರಹ್ಮಲೋಕ
ತಿರುಗೂತ ಬರಗೂತ ಸೊರಗೂತ ಬಳಲೂತ
ಸರವಾರಗಳ ನೋಡುತಲಿ ||

ತೆಗ್ಗುತೆವರನೆ ಮೆಟ್ಟಿ ಬಗ್ಗೆಬಾರದ ಗವಿ
ಎಗ್ಗಳ ಗಿಡುಗಂಟೆಯೊಳಗೆ

ಬಾಡಿ ಬಳಲಿ ಕಣ್ಣುಗೆಟ್ಟಿರೆಲೆ ದೇವ ಕಪ್ಪೆ
ಏಡಿ ತಿಂಬವರ ಮಗಳು ಎಲೆ ದೇವ
ಕೋಡಿ ಮಗಳು ಎಂದು ತಿಳಿದು ಎಲೆ ದೇವ ಅಡವಿ
ಗೂಡಿಸಿನ್ನು ಬಿಟ್ಟರಿವಳ ಎಲೆ ದೇವ ||

ದಡ್ಡ ಮನುಜ ನಾರಂದನೆ ಮುನಿರಾಯ ಇವಳು
ದೊಡ್ಡವರ ಮಗಳಾದಾಳೊ ಮುನಿರಾಯ
ದೊಡ್ಡಿತೋಟ ಖಾಸಭಾಗ ಮುನಿರಾಯ ಲಿಂಗ
ದೊಡ್ಡೋಲಗವ ನೋಡು ನೀ ಮುನಿರಾಯ ||

ಸೃಷ್ಟಿಗೀಶ ಶಿವನೆ ಕೇಳು ಗುರುರಾಯ ಇವಳು
ಕೆಟ್ಟವ್ಯಾಳ್ಳೆ ಜನಿಸಿದವಳು ಎಲೆ ದೇವ
ಪಟ್ಟುಗುಡುಮ ಪರದೇಶಿಯು ಗುರುರಾಯ ಜನನಿ
ಬಿಟ್ಟು ಹೋದರಡವಿಯೊಳಗೆ ಎಲೆ ದೇವ ||

ದಾಂಟಿಸಿದರೆ ಗಿರಿಯ ಸೇರಿ ಎಲೆ ದೇವ ಶಸ್ತ್ರ
ಈಟಿ ಬಿಲ್ಲು ಬಾಣಗಳನು ಎಲೆ ದೇವ
ಕಾಟಗಾರ ಕೂಡಿಕೊಂಡು ಎಲೆ ದೇವ ಇವಳ
ಬೇಟೆ ಅರ್ತಿಗಳನು ನೋಡು ಎಲೆ ದೇವ ||

**ಕಂದ**

ಸಿದ್ಧರಿಬ್ಬರು ಕೂಡಿ ಮದ್ದು ಮಂತ್ರವ ಕಲಿತು
ಶಬ್ದಗಳಾಲಿಸುತ ನೋಡುತಿರಲು
ಲುಬ್ಧ ಕಾಟಕರು ಪಂದಿಯ ಆರ್ಭಟಿಸುತಲಿ
ಗದ್ದಲಿಸಿ ಆಡುತಿರೆ ಬೇಂಟೆಗಳನು ||

ರೂಢಿಗೀಶ್ವರ ಶಿವನು ನಾಡುದೇಶಗಳ ತಿರಿಗಿ
ನೋಡುತಿರೆ ವಿಸ್ಮಯ ಶ್ರೀಗಂಗೆಯ
ಕಾಡುಚಂಚರ ಬೇಂಟೆಗಳ ಕಂಡು ಪರಶಿವನ
ಕೂಡೆ ಬಣ್ಣಿಸಿ ಪೇಳುತಿರ್ದ ಮುನಿಪ ||

ನಡುಗಿತಿನ್ನು ಭೂಮಿ ಗಗನ ಗುರುರಾಯ ಸಪ್ತ
ಕಡಲು ಒಡೆದು ಬೆದರಿದಾವು ಗುರುರಾಯ ||

ಬಹುಕೋಪದಲಿ ಗರ್ಜಿಸಿದರೆ ಗುರುರಾಯ ಗಂಗೆ
ಮಹಿತಳಕ್ಕೆ ಮುಳುಗಿದಂತೆ ಗುರುರಾಯ
ಮಹದೇವನ ಮುಖವ ನೋಡಿ ಗುರುರಾಯ ಗಂಗೆ
ಬಹುದುಃಖದಿ ದುಃಖಿಸಿದಳು ಗುರುರಾಯ ||

ಕೇಳಿ ಘರ್ಜನೆಯ ಧ್ವನಿಗೆ ಗುರುರಾಯ ಗಂಗೆ
ಬಾಳೆ ಸುಳಿಗಳಂತೆ ನಡುಗಿ ಗುರುರಾಯ
ಆಳೊ ಶಿವನ ಮುಖವ ನೋಡಿ ಗುರುರಾಯ ಗಂಗೆ
ಪ್ರಳಾಪದಲಿ ಶೋಕಿಸಿದಳು ಗುರುರಾಯ ||

**ಪದನು:**

ಅಯ್ಯಯ್ಯ ಪಾಪಿ ಶಿವನೆ ನನಗಿನ್ನು ಬೈಯಬಾರದ ಬೈಗಳ
ಕೈಯಾರೆ ಕೊಲ್ವಂತೆ ಅಂತರಿಸಿ ನಿಂದಳು ಸುಯ್ಯಲಾರೆನು ಪ್ರಾಣವ ||

ಇಂತು ಬೈಗುಳವ ಕೇಳಿ ಎಲೆ ಶಿವನೆ ಎಂತು ಸೈರಿಸುವೆನಿನ್ನು
ಹಂತಿಗಟ್ಟನೆ ಕಟ್ಟಿ ಹಲವು ಮಂತ್ರಗಳಿಂದ ಮುಂತೆ ಕೊರಳನೆ ಮುರಿವಳು
ಪಂತ ಪಾಡುಗಳಿಂದ ತಾ ತನ್ನ ಸಂತ ಮೂವರ ಕೈಯಲಿ
ಅಂತರಂಗವ ಬಗಿದು ಸೀಳಿ ಕೊಲಿಸುವಳೀಗ ಪಂಥ ಸುಕುಮಾರರಿಂದ ||

ಜೋಗಿ ವೇಷವನೆ ತಾಳಿ ನೀ ನನ್ನ ಸಾಗಿ ಗಿರಿಗಳನೆ ಹೊಕ್ಕು
ಸೋಗೆಗಂಗಳ ಸೊಬಗೆ ಎಂದೆನುತ ನೀನೆನ್ನ ಹೀಗೆ ಮೋಸವ ಮಾಳ್ಪರೆ
ನಾಗಲೋಕದ ಸಿದ್ಧರೊಡೆಯನೆಂದಾಗರ ಉಳಿಯ ಮಾಡಿದೆ
ಆಗ ಬೇಗದಿ ನನ್ನನೀಗ ಕಳೆವೆನು ಎಂದು ಬೇಗೆಯುರಿಯೊಳಗಿಕ್ಕಿದೆ ||

ಮಡದಿ ಮಕ್ಕಳು ಇಲ್ಲವು ನನಗಿನ್ನು ಪಡೆದ ತಾಯಿಗಳಿಲ್ಲವು
ಒಡವೆಯನು ಗಳಿಸಿದೆನು ಎಂಬುವರು ಇಲ್ಲವೆಂದು ಬೆಡಗು ಮಾಡಿದೆ ನನ್ನನು
ತೊಡೆಯ ಜಾಗವು ತನ್ನದು ಮೇಲಣ ಮುಡಿಯ ಜಾಗವು ನನ್ನದು
ಕಡುಪಾಪಿ ದೊಡ್ಡ ರಕ್ಕಸಿ ನಿನ್ನ ಹೆಂಡತಿ ಕಡಿದು ತಿನ್ನದೆ ಬಿಡುವಳೆ ||

ನೀನಾಗಿ ತಂದ ಮೇಲೆ ಅವಳೆನ್ನ ಸ್ಥಾನಮಾನವ ನೋಡದೆ
ಸ್ಥಾನ ಸೂಕರ ಕೆಟ್ಟ ಜಾತಿಗಳು ಎಂದೆನುತ ಹೀನ ನುಡಿಗಳ ನುಡಿಸಿದೆ

ನೂರು ಕರ್ಮ ಮುಳುಗಿ ಕಳೆದು ಎಲೆ ಗಂಗೆ ನಿನ್ನ
ಮೀರಿ ನಡೆಯೆ ಜನ್ಮವಿಲ್ಲ ಎಲೆ ಗಂಗೆ ||

ಬ್ರಹ್ಮ ವಶ್ಯ ಕರ್ಮಗಳನು ಎಲೆ ಗಂಗೆ ನಿನ್ನ
ನಿರ್ಮಳವ ಮಾಡಿ ಕಳೆವೆ ಎಲೆ ಗಂಗೆ
ಮರ್ಮವರಿಯದೆ ನುಡಿವವರ್ಗೆ ಎಲೆ ಗಂಗೆ ನಿನ್ನ
ಧರ್ಮಗುಣವ ಪಾಲಿಸಿನ್ನು ಎಲೆ ಗಂಗೆ ||

ಹಾರುಜಾತಿಗಳಂತಿರಲಿ ಎಲೆ ಗಂಗೆ ಸವತಿ
ನಾರಿಗಿರಿಜೆ ನುಡಿದ ನುಡಿಯ ಎಲೆ ಗಂಗೆ
ತೂರಿ ಬೂದಿಗಳ ಮಾಡಿದೆವು ಎಲೆ ಗಂಗೆ ಸೂತ್ರ
ದಾರಿ ಶಿವನು ಎಂದು ತಿಳಿಯೆ ಎಲೆ ಗಂಗೆ ||

ತಿಳಿದು ನೋಡು ಪೂರ್ವದಲಿ ಎಲೆ ಗಂಗೆ ನಿಮ್ಮ
ಕಳೆಯು ಒಂದೆ ಶರೀರ ಬೇರೆ ಎಲೆ ಗಂಗೆ
ಅಳಲು ಬಳಲು ನಿಮಗೆ ಉಂಟೆ ಎಲೆ ಗಂಗೆ ನನ್ನ
ಹೊಳೆವ ಕನ್ನಡಿಯ ಬೆಳಕೆ ಎಲೆ ಗಂಗೆ ||

ನಳಿನಮುಖಿಯ ಸಂತೈಸಿದರೆ ಗುರುರಾಯ ಸತಿಗೆ
ತಿಳಿಯಿತಿನ್ನು ಪೂರ್ವಜ್ಞಾನ ಗುರುರಾಯ
ಇಳೆಯ ಕಪಟನಟನಾಟಕನು ಗುರುರಾಯ ಎಂದು
ಬಳಿಕ ಶಿವನ ಸ್ತುತಿ ಮಾಡಿದಳು ಗುರುರಾಯ ||

ಲೋಕರತ್ನ ಮಾಣಿಕವು ಎಲೆ ಗಂಗೆ ಗಿರಿಜೆ
ಯಾಕಾರವೆ ಆದಿಶಕ್ತಿ ಎಲೆ ಗಂಗೆ
ಬೇಕು ನಿನಗೆ ಗಿರಿಜಾದೇವಿ ಎಲೆ ಗಂಗೆ ನನ್ನ
ಏಕೋರೂಪ ತಿಳಿದು ನೋಡು ಎಲೆ ಗಂಗೆ ||

**ಪದನು:**

ತ್ರಿಪುರಸಂಹಾರಿ ಕೇಳು ವಿಷ್ಣುವ ಕಪಟನಾಟಕನೆಂಬರು
ಕಪಿಯ ಮನುಜರು ಏನಬಲ್ಲರು ವಿಷ್ಣುವಿನ ಗುಪಿತದಿಂದಾಡಿಸುವುದ ||

ಇರುವೆ ಮೊದಲಾನೆ ಕಡೆಯು ಎಂದೆಂಬ ನಾನಾ ಜೀವನಗಳೆಲ್ಲ
ಮೀನಕೇತನಪಿತನು ರಕ್ಷಿಸಿದನೆಂಬರು ಹಾನಿ ಬಂದಿರೆ ಮಗನಿಗೆ

ಚಂದ್ರಕಾಂತದ ಸ್ತ್ರೀಯಳೆ ಕೇಳಿನ್ನು ಮಂದಾಲಗಿರಿಯ ಜೋಗಿ
ಬಂದು ಗಂಗೆಯ ಕೂಡೆ ಮಾತನಾಡಲು ಮಡದಿಯೆಂದಪರಿ ಹೇಗೆ ಹೇಳು
ಬೆಂದ ಮಸಣದ ಬೂದಿಯ ತಲೆಗೆಲ್ಲ ಮಂದಮಲಕನೆ ಮಾಡುತಾ
ತಂದೆ ಗುರುಸಂಗಮೇಶ್ವರನು ಕೊಂಡೊಯ್ದು ಅಂದವನು ಪೇಳು ನಮಗೆ ॥

**ಸಂಗತ್ಯ:**

ಹರಶರಣರ ಹೃತ್ಕಮಲಾರ್ಕತೇಜನೆ
ಹರುಷಾಬ್ಧಿ ನಿಜ ಪಾಲ್ಗಡಲೆ
ಧರೆಯು ಮೂಲೋಕವ ರಕ್ಷಿಪ ಗಂಗೆಯ
ಮರುಳ್ಮಾಡಿ ವೊಯ್ದುದ ಕೇಳು ॥

ಚಲಂದಕವೈರಿ ಮಸ್ತಕಶೂಲ ಬಸವಯ್ಯ
ಒಲಿದು ಕೇಳಿನ್ನು ಮೆಲ್ಗತೆಯ
ಹುಲಿಯ ಚರ್ಮವನುಟ್ಟು ಮಲೆನಾಡ ಜೋಗಿಯ
ಸ್ಥಲಕುಲಗಳನು ಕೇಳಿದಳು ॥

ಮುತ್ತಿನ ಕಂಥೆಯ ಮುನಿ ಮಹಾಜೋಗಿ ನೀ
ವೆತ್ತಲಿಂದುದ್ಭವಿಸಿದಿರಿ
ಮರ್ತ್ಯಲೋಕದ ಮಾನವರಲ್ಲ ಮುನಿರಾಯ
ಕುತ್ತಿಗೆಗಳ ಮಾತು ಬೆಡಗು ॥

ಸಾಗರಗುಣದ ಸನ್ಮಾನಿಯೆ ನೀ ಕೇಳು
ನಾಗಲೋಕಗಳ ನೋಡುತಲಿ
ಮೇಗಾಡಂಬರ ಮಠಮಾನ್ಯದ ಮುನಿರಾಯ
ಭಾಗ್ಯ ಸಂಪನ್ನದ ಜೋಗಿ ॥

ಧನಪತಿ ಕುಬೇರ ಮನೆಯ ಮಗಳ ಮಗ
ಘನ ನವಲಕ್ಷ್ಮಿ ಎಂಬುವರು
ವನಜಾಕ್ಷಿಯರು ನಮ್ಮ ಮನೆ ರಜದೆಗೆವಂಥ
ಕೊನೆಯ ಬಾಗಿಲ ಸೇವಕರು ॥

ಮುತ್ತಯ್ಯ ಗಳಿಸಿದ ದ್ರವ್ಯವು ಮೂ
ವತ್ತಾರ್ಕೋಟಿ ಎತ್ತಿಲಿ ಹೇರ್ವರಿಲ್ಲ

ವರಮುನಿ ಜೋಗಿಗಳೆನುತ ಸುವರ್ಣದ
ಶಿರವ ಕಪಾಲವನಿತ್ತ ॥

ಕಾಮನ ಮನೆಗೆ ಹೋದರ ತನ್ನ ಶರೀರವ
ಸ್ವಾಮಿಗರ್ಪಿಸಿದನು ಕೇಳು
ಈ ಮಹಾಭಕ್ತಿಭಾವನೆಗಳ ಕೈಕೊಂಡು
ಭೂಮಿಯೊಳಗೆ ಚರಿಸುತಲಿ ॥

ಹಾಲ ಸಮುದ್ರದ ನೀಲಗಂಗೆಯ ಕೇಳು
ಮೇಲು ದೇಶಗಳ ನೋಡುತಲಿ
ಪಾಲಿಸಿ ಪರಮಲೀಲೆಯಿಂದಾಡುವ
ಬಾಲಸ್ತ್ರೀಯರ ಭಕ್ತಿ ಕೇಳು ॥

ವಾಣಿಯು ಮಾಧವ ಪಾಣಿಯು ಚಂದ್ರನ
ರಾಣಿಯು ರೋಹಿಣಿದೇವಿ
ಜಾಣೆರಂಭೆಯು ಊರ್ವಸಿ ಚಿತ್ರಾಂಗಿಯು
ಮಾಣದೆ ಭಕ್ತಿ ಮಾಡಿದರು ॥

ದೇವಗಂಗೆಯು ನಾಗಕನ್ಯೆಯು ಮರ್ತ್ಯದ
ಜೀವಗನ್ನೆಯರು ಭಕ್ತಿಯಲಿ
ತಾವರೆ ಕಮಲದಿ ಸೇವೆಗಳನು ಮಾಡಿ
ಭಾವಭಿಕ್ಷೆಗಳ ನೀಡಿದರು ॥

ವಿಮಲೇರ ಭಕ್ತಿಗಳ ಕೈಕೊಂಡ ಮುನಿಗಳ
ಸೀಮೆಗಳ ನೋಡುತ ಬರಲು
ಹೇಮಗಿರಿರಾಜನ ಮಗಳು ಪಾರ್ವತಿ ಭಕ್ತಿಯ
ಕ್ರಮದಿ ನಿಂದಿರಿಸುತಲೆಮ್ಮ ॥

ಮುನಿರಾಯ ಜೋಗಿಯೆ ಘನಪುಣ್ಯ ಕ್ಷೇತ್ರವೆ
ನೆನವೆಂಬ ನಿಜದ ಪಾಲ್ಗಡಲೆ
ವನವ ಸಂಚರಿಸುತ ದಣಿದು ಬಂದಿರಿಯೆಂದು
ತನುಮನಗಳ ಧಾರೆಯೆರೆದು ॥

ಮುನಿಯ ಕಾಣುತಲೆದ್ದು ವಿನಯದಿ ಶರಣೆಂದು
ವನಜಾಕ್ಷಿ ಹಸ್ತವ ಮುಗಿದು

ಭೂಮಿ ಚಕ್ರಗಳಿಂದ ಆ ಮಹಾದೈತ್ಯನ
ಗೋಮಾಳಗಳ ಮುರಿದೊತ್ತಿ
ತಾಮಸ ತಲೆಯನು ನೇಮದಿಂ ಧರಿಸಿದೆ
ಸೋಮವದನೆಯೆ ಕೇಳಿನ್ನು ॥

ಕೊಲ್ಲಾಪುರದೊಳೊಬ್ಬ ಬಲ್ಲಿದ ದುರ್ಗಿ ತಾ
ಎಲ್ಲ ವಿದ್ಯೆಕೆ ಗುರುವೆನಿಸಿ
ಕಳ್ಳಜೋಗಿಗಳನು ಮೆಲ್ಲನೆ ಹಿಡಿತಂದು
ಮುಳ್ಳನೂರಿಸಿ ತಿರುಹುವಳು ॥

ಬಿರಿದ ಸಾರಲು ಕೇಳಿ ಗರ್ವ ಮುರಿವೆನೆಂದು
ಪುರದೊಳು ನಾ ಹೋಗಿ ನಿಲಲು
ಉರವಣಿಸುತಲೆದ್ದು ಬಿರಿನೋಟದಿಂದಲ್ಲಿ
ಸುರಿದಾಳು ತನ್ನ ವಿದ್ಯೆಗಳ ॥

ಸಿಂಗಿಕಾಳಕೂಟ ನುಂಗಬಾರದ ವಿಷ
ಹಿಂಗದೆ ಮೋಡಿ ಹಾಕಿದರೆ
ಅಂಗೈಯಲೊರಸುತ ಜಂಗುಳಿದುರ್ಗಿಯ
ಶೃಂಗಾರ ಮೂಗುಗಳನರಿದೆ ॥

ಮಾರಿಯ ಮುರಿದೊತ್ತಿ ಭಾರಿ ಕಿನ್ನರಿಮಾಡಿ
ತೋರಿದೆ ನಾನಾ ವಿದ್ಯೆಗಳ
ಮೂರುಲೋಕದೊಳಗೆನಗೆಣೆಯಿಲ್ಲ ಶ್ರೀಗಂಗೆ
ಮೀರಿದ ಮಲೆಯಾಳ ಜೋಗಿ ॥

ಭಾರಿ ವಿದ್ಯೆವು ನಮ್ಮ ಗಾರುಡವಿದ್ಯೆವು
ಮೂರು ಲೋಕದ ಇಂದ್ರಜಾಲ
ನಾರಸಿಂಹನ ಮಂತ್ರ ವೀರಭದ್ರನ ಯಂತ್ರ
ಹಾರಿಹೋದವು ನಿನ್ನ ಬಳಿಯ ॥

ಇಂಥ ವಿದ್ಯೆಗಳೆಲ್ಲ ಏನಾಗಿ ಹೋದವೊ
ಕಾಂತೆ ನಿನ್ನಯ ಸ್ಥಲದೊಳಗೆ
ಚಿಂತೆ ಹತ್ತಿತು ನಿನ್ನ ಚಲ್ವರೂಪಿಗೆ ಚಂದ್ರ
ಕಾಂತೆ ನೀ ಕಡೆಗಿಡಬೇಡ ॥

ಏನು ಕಾರಣ ಮುನ್ನ ತಪವ ನೀ ಮಾಡಿದೆ
ನಾನು ಸಿಲ್ಕಿದೆ ನಿನ್ನ ಬಲೆಗೆ
ಮಾನಿನಿ ಸತಿಸುತರೆನಗಿಲ್ಲ ಶ್ರೀಗಂಗೆ
ನಾನು ನೀನೇಕ ಪ್ರಾಣಿಗಳು ||

ದೇಶದೇಶವ ತಿರುಗಿ ಬೇಸತ್ತೆನೆಲೆ ಗಂಗೆ ಸ
ನ್ಯಾಸಿ ಶಿವನ ಮಾರ್ಗಗಳು
ಶೇಷನಿಗಳವಲ್ಲ ಗಳಿಸಿದ ದ್ರವ್ಯವ
ಕೂಸು ಕುನ್ನಿಗಳುಂಬೋರಿಲ್ಲ ||

ಹೆಂಡಿರು ಮಕ್ಕಳು ಎನಗಿಲ್ಲ ಶ್ರೀಗಂಗೆ
ಉಂಡುಟ್ಟು ಸುಖದೊಳಗಿಹುದು
ಮಂಡೆ ಮಾಣಿಕ ಮಾಡಿ ಸಲಹುವೆನೆಲೆ ಗಂಗೆ
ಕೆಂಚಗಣ್ಣಿನ ಶಿವನಾಣೆ ||

ಜ್ಞಾನಿಬಸವ ಕೇಳು ಆನಂದ ಜೋಗಿಯು
ನಾನಾ ಗಾರುಡಗಳ ಮಾಡಿ
ಮಾನಿನಿಯೆಳ ಬಾಯ ಮೌನವ ಮಾಡಿದ
ಭಾನು ಪ್ರಕಾಶದ ಜೋಗಿ ||

ಹಲವು ಬೋಧೆಗಳೇತಕೆನುತಲಿ ಮಲೆಯಾಳ
ಒಲುಮೆಯ ಬೂದಿಯ ತೆಗೆದು
ತಲೆ ಮಾಲೆಗಳ ಮೇಲೆ ಮಂತ್ರಿಸಿ ಚೆಲ್ಲಲು
ಮಲಗಿತು ಜ್ಞಾನದ ಜ್ಯೋತಿ ||

ದೇವಬಸವ ಕೇಳು ಭಾವಜ ಹರಜೋಗಿ
ಸ್ತ್ರೀವಶ್ಯ ಜನವಶ್ಯಗಳನು
ಭಾವೆಯ ತಲೆಯೊಳು ಕಾಮಾರಿ ತಳೆಯಲು
ಜೀವದ ಜ್ಞಾನವ ತಿಳಿದು ||

ತಳೆಯಲು ಚಂದ್ರನ ಕಳೆಯೇರಿ ಕಾಂತಿಯು
ತಿಳಿದಳು ತನ್ನಯ ಶಿವನ
ಸುಳಿದಾನು ಎನ್ನಯ ಎಳೆಭಕ್ತಿಭಾವಕೆ
ತಳಿರ ಪಾದಕೆ ಎರಗಿದಳು ||

ಗಂಡಮೆಟ್ಟ ಶಾಪೂರ ಪುಂಡ ನನ್ನ ಗಂಡ ಭಾದ್ದೂರಾ
ನನಗ ಕೊಟ್ಟೆಲೆ ಹೊಂಗಲ ಶಾಲೇನಾ ನನ್ನ ತವರ ಮನಿಯ ಬೈಲವಾಡನಾ
ದೇಶದೊಳು ಶಾಪೂರ ಮೂರುತೇನಾ ಅಲ್ಲಿ ನೆಲೆಸ್ಯಾನೊ ಬಸವಣ್ಣ ದೇವರೇನಾ
ಆತನ ಪಾದಕ್ಕ ಮಾಡುವೆ ನಮಸ್ಕಾರೆನಾ ಗಂಡ ಮೆಟ್ಟ……..ll
(ರಸ್ತಾ ಪಡೆದು ಸಂಗಣ್ಣ ಬಾಳಣ್ಣ ಬರುವರು)

**ಸಂಗ್ಯಾ :** ಸೀಸಾ ಹೊಯ್ದಂಗಾತೋ ದೇಹದಲ್ಲಿ ಕಾಸೀ ಆಕಿನ ಇದ್ದಲ್ಲೆ ತರಬೇಕೊ
**ಬಾಳಾ :** ಮನ ವಡಸಿ ಉಂಗುರಗೂದಲ ಬೈತಲ ವಳ್ಳೆ ತರಳಾ ಹೊಟ್ಯಾಗಿನ ಕರುಳ
ಆಗೈತೈತೋ ಕಸವಿಸಿ ॥ಆಕಿನ ಇದ್ದಲ್ಲಿ ತರಬೇಕೊ ಮನವಡಸಿ ॥ಸೀಸಾ ॥

ಪದ್ಮಿನಿ ಜಾತಿ ಹೆಣ್ಣ ನಿವಳ ತುಟಿ ಕೆಂಪು ಹವಳ ಕಂಡೆನೋ ಪುರಮಾಸಿ
ಆಕಿನ ಇದ್ದಲ್ಲಿ ತರಬೇಕೊ ಮನವಡಸಿ ॥ಸೀಸಾ…ll
ಶಾಪೂರ ಶಂಕರಸ ಹರಸೀತಗದಾರೊ ಧರತಿ ಆಗತೈತೊ ಕಸವೀಸಿ ॥ಆಕೀನ….ll

**ಸಂಗ್ಯಾ :**ಬಾಳ್ಯಾ ಕೇಳೋ ಮಾತೈತಿ ನನ್ನೊಂದಾ
ಆಕಿ ಬಾಗಿಲ ಮುಂದ ಖೂನಾ ಹಿಡಿಯೊ ಮರವೈತಿ ಟೆಂಗಿನ
ನೆಟ್ಟಗ್ಹೋಗೋ ಪ್ಯಾಟಿಯ ರಸ್ತೆ ಹಿಡದಾ ಮಾರ್ಕೆಟೀನ ಮುಂದ
ಮನಿ ಪ್ರಿತೋ ಮೂರ ಮಜಲಿಂದ ll

ಬತ್ತಿ ಕಟ್ಟೋ ಬೆಂಕಿಯ ನೆವದಿಂದ ಬತ್ತಿ ಕಟ್ಟೋ ಬೆಂಕಿಯ ನೆವದಿಂದಾ
ಆಕಿ ಬರತಾಳೋ ವಳಗಿಂದ ಗಪ್ಪನೆ ಕುಂದ್ರಪ್ಪಾ ನೆಲ ಹಿಡದಾ ll

ಮೆಲ್ಲಕ-ಎಳಿ ತಗಿ ಮಾತಿಂದ ಮೆಲ್ಲಕ ಏಳಿ ತಗಿ ಮಾತಿಂದ
ಬಿಳಬೆಳಸ್ಹೇಳೋ ನಂದ - ಊರಾಗ ಹಿರೇತಾನ ಸಂಗ್ಯಾಂದ ನಾ

**ಗಂಗವ್ವಾ :** ಯಾರಪ್ಪಾ ಯಣ್ಣಾ ನೀನೂ ಇಲ್ಲಿಗೆ ಬಂದ ಕಾರಣವೇನು ?
ಬಂದ ಕಾರಣವೇನು ? ಗುರುತು ನಮಗೇನು ?
ಬಂದ ಬಗಿ ಬಲ್ಲೆ ನಾನೂ ಪ್ಯಾಟ್ಯಾಗ ಭೇಟಿಯಾಗಿದ್ಯೋ ನೀನೂ
ಭೇಟಿಯಾಗಿದ್ಯೊ ನೀನೂ ಬಾಳಣ್ಣ ಹೌದೇನು ?
ಬಾರಪ್ಪ ವಳಗ ನೀನೂ ಯಾರ್ಯಾರಿಲ್ಲಾ ಅಂಜಬೇಡಪ್ಪಾ ನೀನು ll
ಅಂಜಬ್ಯಾಡಪ್ಪಾ ನೀನು ? ಭಯವು ನಮಗೇನು ? ll
ಶಾಪುರ ಶಂಕರನೂ ಇಂದು ನಮಗ ಕೂಡಿಸಿ ಕೊಟ್ಟಾನು
ಕೂಡಿಸಿ ಕೊಟ್ಟಾನು ? ಹೇಳಲೆ ಇನ್ನೇನು ? llಬಾರಪ್ಪ ವಳಗ ll

ಶೂರರಾದ ರಕ್ಕಸರೆಲ್ಲಾ
ವೀರ ಬೊಬ್ಬಿಯಾರ್ಭಟದಿಂದ
ತೂರಿ ಬಂದಾರ ಕಪಿಗಳ ಗುಂಪಿನ ಮ್ಯಾಲ ॥
ಬರುವದ ನೋಡಿ ಕಪಿಗಳು ಆದಾರ ಬೆಂಕಿ ಲಾಲಾ॥

ಮರ ಗುಂಡು ಕಲ್ಲುಗಳನ್ನು
ಧೀರ ಕಪಿಗಳು ತೆಗೆದುಕೊಂಡು
ಸರಸರನೆ ಹಾಕ್ಯಾರೊ ದೈತ್ಯರು ಮ್ಯಾಲಾ
ಪರಿಪರಿ ಹೊಡದರ ದೈತ್ಯರ ಧೃತಿಗೆಡಲಿಲ್ಲ॥

**ಏರ**

ಕಲಿಗಳು ನಾವೆ ಎಂದೆನುತ ರಕ್ಕಸರು
ನಿಲ್ಲದೆ ಹೊಡದ್ರೊ ವಾನರರು ॥
ವಾನರನ್ಹೊಡದದ್ದು ನೋಡಿ ಮಾನವಂತ
ರಾಮಚಂದ್ರ ಸಾಗಿ ನಿಂತೋ ಕಾಳಗಕ್ಕ

**ಚಾಲ**

ಚಂದದಿಂದ ಶ್ರೀರಾಮಚಂದ್ರ
ಮುಂದೆ ಬಂದು ನಿಂತಾನ ನೋಡಿ
ಸುಂದರ ರಕ್ಕಸರೆಲ್ಲಾರನ್ನು
ಇಂದಿನ ದಿವಸಾ ಹೊಡೆಯುವೆನು ಕಾಳಗದಲ್ಲಿ ನಾನು॥

ನೊಂದಂಥ ಕಪಿಗಳೇ ಕೇಳ್ರಿ ॥
ಮಂದಮತಿ ರಕ್ಕಸರನ್ನು
ಕೊಂದ ಹಾಕುವೆನು ಕೇಳ್ರಿ ನಾನು
ಚಂದದಿಂದ ಬಿಟ್ಟೇನ ನೋಡರಿ ಮೋಹನಾಸ್ತ್ರವನ್ನು॥

ಸುಂದರ ಅಸ್ತ್ರ ಬಿಟ್ಟ ಕೂಡಲೇ
ಬಂಧುರವಾದ ರಕ್ಕಸರು
ಕಂದಿ ಬಿದ್ದರು ನೋಡ್ರಿ ನೆಲವನ್ನು
ಕೊಂದ ಬಿಡ್ರಿ ಇವರಲ್ಲಿ ಒಬ್ಬನನ್ನು॥

ಮಂಕ ಹತ್ತೇತೇನೋ ಪಂಕ ಹಾರಿ ತಿರಗತಿ
ಬಂಕನಾಥಗ ಹೋಗಿ ಕೇಳೋ ಈ ಕತಿ
ಜಲ್ದಿ ಮಾಡೋ ಶಂಕರ ಶಿವ ಶಿವ ಸ್ತುತಿ
ನನ್ನ ಮಾತ ಸಂಕವಿಲ್ಲದಂಗಾತಿ
ನುಗಿಸಿ ಕೊಟ್ಟ ಬ್ರಹ್ಮದೇವರಿಗೆ ಚಿಂತಿ
ಹವ್ವಹಾರಿ ಹೋದಾನೋ ಕೈಲಾಸಕ ಹತ್ತಿ ॥
ಪಿತನಿಗೆ ನನಗ ಕದನ ಬೆಳೆಸೋದಕಾಗಿ
ಮತಿಗೇಡಿ ಬಂದಿ ಎಲ್ಲಿಂದಾ ॥

**16**

ಕಷ್ಟ ಬಂದಿತಾ ಇಂದ್ರಾ ಎಷ್ಟ ಹೇಳಲಿ ನಿನಗ
ಕೊಟ್ಟ ಎನ್ನ ಪ್ರಾಣ ರಕ್ಷಿಸರಿ ॥
ಉಳಸಯ್ಯ ಪ್ರಾಣವು ಬಂದು ಗಳಸಯ್ಯ ಪುಣ್ಯವು ಮುಂದ
ಅಳತಾನ ಭೂಮಿಗೆ ಬಿದ್ದು ಗಯನು
ಇದರ ಹೊರ್ತ ನನಗ ಹಳಹಳಿ ಏನು ಇಲ್ಲ ಅಂತಾನು ॥
ಹಲ್ಲ ಕಡಿದ ಆಗ ಹರಿಯು ತಲ್ಲಣಿಸಿ ಮಾಡಿದ ಪಂಥ
ಕೊಲ್ಲದಿದ್ದರ ನಮ್ಮ ತಂದಿ ಆಣಿ
ಎಂಟ ದಿವಸ ಮೀರಿದರ ಹೋಗಿ ಬೀಳುವೆನು ಅಗ್ನಿ
ಕೇಳಿನ್ನ ಕಳವಳಗೊಂಡು ಹೇಳತಾನ ಇಂದ್ರಗ ಹೋಗಿ
ತಾಳಲಾರೆನಯ್ಯ ಶ್ರೀ ಕೃಷ್ಣನಗಿನ್ನ
ದುಃಖ ಮಾಡುತ ಹೊಡಮರಳಿ ಶ್ರೀ ಬ್ರಹ್ಮನ ಹಂತೇಕ ಬನ್ನಿ ॥
ಕೊಟ್ಟವನಾ ಪ್ರಾಣ ಉಳಸಯ್ಯ ಶ್ರೀ ಹರಿಯು
ಆಟ ದಿವಸದಲಿ ಹೊಡಿಯುವವನು

**17**

ಆದಿ ಶಕ್ತಿಯು ಶಿವನ ಪಾದ ಹಿಡದ ಅಂತಾಳೋ
ಸಾಧು ಸಂತರಿಗೆ ಆಗಿ ಪರಿಪಾಲಾ ॥

ಮಾಯಾದ ಪರಮೇಶ್ವರಾ ಬಾಯಾರಿ ನಿಂತಾನೊ ಗಯಾ
ತಾಯಿ ಪಾರ್ವತೆಮ್ಮಾ ಕೊಟ್ಟಳೋ ನನಗ ಧೈರ್ಯವನ್ನು
ನನ್ನ ಕಾಯಲಿಲ್ಲ ಜಗತ್ ಕರ್ತ ಪರಶಿವನು
ಕೇಳ ಸಾಯದ ವ್ಯಕ್ತಿ ಒಂದ ಹೇಳುವೆನು
ನಾರದಲ್ಲಿಗಿ ಹೋಗಿ ಸಾರಯ್ಯ ದುಃಖವ ಆತ

